**PW- 1**

**ದಿನಾಂಕಃ 05-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ಎಂ ಎಸ್ ಎ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ. ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯ್ತು.

ದೂರಿನ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯ್ತು.

ಸ್ಥಳ ಪಂಚನಾಮೆಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯ್ತು.

ಗಾಯದ ಪ್ರಮಾಣ ಪತ್ರ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯ್ತು.

ಐಎಂವಿ ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯ್ತು.

ಅಂತಮ ವರದಿ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯ್ತು.

ಶಿವಮೊಗಾ ಮೆಗ್ಗಾನ ಆಸ್ಪತ್ರೆಯವರು ಕೊಟ್ಟ ಡಿಸ್ ಚಾರ್ಜ ಸಮರಿ ನೋಡಿ ಗುರುತಿಸಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯ್ತು.

ವೆನ್ ಲಾಕ್ ಆಸ್ಪತ್ರೆಯವರು ಕೊಟ್ಟ ಡಿಸ್ ಚಾರ್ಜ ಸಮರಿ ನೋಡಿ ಗುರುತಿಸಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯ್ತು.

**PW- 1**

ಸುಬ್ಬಯ್ಯ ಮೆಡಿಕಲ್ ಕಾಲೇಜ್ ಆಸ್ಪತ್ರೆಯವರು ಕೊಟ್ಟ ಡಿಸ್ ಚಾರ್ಜ ಸಮರಿ ನೋಡಿ ಗುರುತಿಸಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯ್ತು.

ಗಾಯದ ವಿವರಣೆ ಬಗ್ಗೆ ಕೊಟ್ಟ ದಾಖಲೆ ನೋಡಿ ಗುರುತಿಸಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯ್ತು.

77 ವೈದ್ಯಕೀಯ ಬಿಲ್ಲು ಗಳು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಯ್ತು.

12 ಸಲಹಾ ಚೀಟಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-12 ಎಂದು ಗುರುತಿಸಲಾಯ್ತು.

12 ಓ ಪಿ ಡಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-13 ಎಂದು ಗುರುತಿಸಲಾಯ್ತು.

26 ವೈದ್ಯಕೀ ವರದಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯ್ತು.

ಅಂಗನ್ಯೂನ್ಯತೆಯ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯ್ತು.

8 ಕ್ಷ ಕಿರಣ ಒಟ್ಟು ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-16 ಎಂದು ಗುರುತಿಸಲಾಯ್ತು.

ಅರ್ಜಿದಾರನ ಮೂಲ ಆಧಾರ ಕಾರ್ಡನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯ್ತು.

ನನ್ನ ಮೂಲ ಪಾನ್ ಕಾರ್ಡನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯ್ತು.

ನನ್ನ ಮೂಲ ಬ್ಯಾಂಕಿನ ಪಾಸ್ ಬುಕ್ ಮಾರ್ಕಸ ಕಾರ್ಡನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಯ್ತು.

**PW- 1**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಆರ್.ಎಸ್.ಎಸ್.ವಕೀಲರಿಂದಃ**

1. ದೂರನ್ನು ನನ್ನ ಹೆಂಡತಿ ಕೊಟ್ಟಿರುತ್ತಾಳೆ. ದೂರನ್ನು ನನ್ನ ಹೆಂಡತಿ ಪೋಲಿಸ್ ಠಾಣೆಗೆ ಹೋಗಿ ಕೊಟ್ಟಿರುತ್ತಾಳೆ. ನನ್ನ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ಇಬ್ಬರು ಚಿಕ್ಕ ಮಕ್ಕಳು ಇರುತ್ತಾರೆ. ನಿಪಿ-2 ನ್ನು ನಾನೇ ಪೋಲಿಸ್ ಠಾಣೆಗೆ ಹೋಗಿ ಕೊಟ್ಟಿದೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ದೂರು ಕೊಡಲು ಒಟ್ಟು 54 ದಿನಗಳ ವಿಳಂಭ ವಿದ್ದು ಅದಕ್ಕೆ ಕಾರಣ ನಾನೇ ಸ್ವಂತಹ ಹೋಗಿ ಕೊಡಬೇಕಾಗಿತ್ತು ಮನೆಯಲ್ಲಿ ಯಾರು ಇಲ್ಲದ ಕಾರಣ ವಿಳಂಭ ಆಗಿತ್ತು. ನನ್ನ ಅಣ್ಣತಮ್ಮಂದಿರು ಇದ್ದು ಅವರು ಬೇರೆ ಕಡೆ ಇದ್ದಾರೆ.

2. ನಿಪಿ-2 ದೂರಿನಲ್ಲಿ ದಃ 10-12-2021 ರಂದು ಆಸ್ಪತ್ರೆಯಿಂದ ಡಿಸ್ ಚಾರ್ಜ ಆಗಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆ ಎಂದು ತೋರಿಸಲಾಗಿದೆ ಎಂದರೆ ನಿಜ. ನಾನು ದೂರುನ್ನು ದಿಃ 23-12-2021 ರಂದು ಕೊಟ್ಟಿದ್ದು ಒಟ್ಟು 54 ದಿನಗಳ ನಂತರ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತದ ನಂತರ ನನ್ನ ಮನೆಯವರಾಗಲಿ ಅಥವಾ ಆಸ್ಪತ್ರೆಯವರಾಗಲಿ ಅಪಘಾತದ ಕುರಿತು ಯಾರು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಪ್ರಕಾರ ಗೊಡ್ವನ್ ಒಳಗಡೆ ಇರುವ ದಾರಿಯಲ್ಲಿ ಹಿಂದಿನಿಂದ ಬಂದು ನನಗೆ ಅಪಘಾತ ಪಡಿಸಲಾಗಿದೆ. ನಿಪಿ-8 ದಾಖಲೆಯಲ್ಲಿ ದ್ವಿ ಚಕ್ರ ವಾಹನ ಸ್ಕಿಡ್ ಆಗಿ ಬಿದ್ದು ಅಪಘಾತ ಆಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಲಾರಿ ಹಿಂದಿನಿಂದ ಜೊರಾಗಿ ಬಂದು ಅಪಘಾತ ಪಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನಾನು ಹೇಳಿರುವಂತೆ ಲಾರಿಯಿಂದ ಆಗಿಲ್ಲ ಮತ್ತು ಅಪಘಾತ ಆಗಿದ್ದೆ ಇಲ್ಲ ಎಂದರೆ ಸರಿಯಲ್ಲ.

3. ನಾನು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂರುತ್ತೇನೆ. ನಿಪಿ-9 ರಲ್ಲಿ ಅಪಘಾತದ ವಿಷಯ ಬರಿಯದೆ ಇರುವುದರಿಂದ ಅದು ಅಪಘಾತಕ್ಕೆ ಸಂಬಂದಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಅಪಘಾತದ ವಿಷಯವನ್ನು ಸುಳ್ಳಿನಿಂದ ತೋರಿಸಲಾಗಿದೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಮೂಳೆ ಮುರಿತದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಆಗಿಲ್ಲ ಮತ್ತು ಅಪಘಾತದಲ್ಲಿ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನಾನೇ ಸ್ವಂತಹ 54 ದಿನಗಳ ವಿಳಂಭ ಮಾಡಿ ಪೋಲಿಸ ಠಾಣೆಗೆ ಹೋಗಿ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲು,ಔಷದಿ ಚೀಟಿ ಹಾಗು ಇತರ ವೈದ್ಯಕೀಯ ದಾಖಲೆಗಳು ಸೃಷ್ಟಿಸಿಕೊಂಡು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಂಗನ್ಯೂನ್ಯತೆ ಕೊಟ್ಟ ವೈದ್ಯರು ಬಳಿ ಕೇವಲ ಒಂದು ಬಾರಿ ಮಾತ್ರ ನಾನು ಹೋಗಿರುತ್ತೇನೆ. ಸದರಿ ವೈದ್ಯರು ಚಿಕಿತ್ಸೆ ಕೊಟ್ಟ ವೈದ್ಯರು ಅಲ್ಲ ಆದರೂ ಕೂಡಾ ಅವರು ನನಗೆ ನನ್ನ ವಿಂತಿಯ ಮೇರೆಗೆ ಅಂಗನ್ಯೂನ್ಯತೆಯನ್ನು ಸುಳ್ಳಿನಿಂದ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಂಗನ್ಯೂನ್ಯತೆಯಲ್ಲಿ ತೊಂದರೆಗಳನ್ನು ತೋರಿಸಿದ್ದು ಅವುಗಳು ಯಾವುದೇ ನ್ಯೂನ್ಯತೆ ಇರದೆ ಇದ್ದರು ಸಹ ತಪ್ಪಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. 2 ಲಕ್ಷ ರೂಪಾಯಿ ವೈದ್ಯಕೀಯ ಚಿಕಿತ್ಸೆಗಾಗಿ ಮುಂದೆ 1 ಲಕ್ಷ ಹಣದ ಅವಶ್ಯಕತೆ ಇದೆ ಎಂದು ಸುಳ್ಳು ತೋರಿಸಿರುತ್ತೆನೆ ಎಂದರೆ ಸರಿಯಲ್ಲ.

5. ನನ್ನ ಆದಾರ ಕಾರ್ಡಿನಲ್ಲಿ ತೋರಿಸಿದಂತೆ ನನ ಜನ್ಮ ದಿಃ 20-07-1975 ನಿಜ. ಸದರಿ ಅಪಘಾತ ಆಗಿದೆ ಎಂದು ಹೇಳುವ ಸಮಯಕ್ಕೆ ನನಗೆ 47 ವರ್ಷ ನಡೆಯುತ್ತಾ ಇತ್ತು ಎಂದರೆ ಸರಿಯಲ್ಲ. ಅಪಘಾತಆಗಿದೆ ಎಂದು ಹೇಳುವ ಸ್ಥಳ ಸಾರ್ವಜನಿಕ ರಸ್ತೆ ಇರದೇ ಇರುವ ಕಾರಣ ಆ ಕಾರಣದಿಂದಾಗಿ ನನ್ನ ಅರ್ಜಿ ಉರ್ಜಿತವಲ್ಲ ಎಂದರೆ ಸರಿಯಲ್ಲ.

6. ನಾನು ವ್ಯವಸಾಯ ಮತ್ತು ಕೂಲಿಯಿಂದ ಪ್ರತಿ ತಿಂಗಳು 25 ಸಾವಿರ ಹಣ ಸಂಪಾದಿಸುತ್ತಿದ್ದೆ ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟ್ರಾನ್ಸ್ ಪೋರ್ಟ್ ಕಚೇರಿಯಲ್ಲಿ ಬರೆದುಕೊಳ್ಳುವುದು ಮತ್ತು ಕೂಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಕಿಲ್ಲ ಎಂದರೆ ನಿಜ. ಸದರಿ ನಾನು ಅಲ್ಲಿ ಹೋಗಿಲ್ಲ ಮತ್ತು ಯಾವುದೇ ಕೆಲಸ ಮಾಡಿಲ್ಲ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆಗಿದೆ ಎಂದು ಹೇಳು ಸಮಯಕ್ಕೆ ವಾಹನ ಚಾಲನಾ ಮಾಡುವ ವ್ಯಕ್ತಿಗೆ ಚಾಲನಾ ಪ್ರಮಾಣ ಪತ್ರ ಇದ್ದಿರಲಿಲ್ಲ ಮತ್ತು ವಾಹಕ್ಕೆ ಸರಿಯಾದ ಫಿಟ್ ನೆಸ್ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಈಗ ನಾನು ಸಂಪೂರ್ಣವಾಗಿ ಚಿಕಿತ್ಸೆಯಿಂದ ಗುಣಮುಖನಾಗಿದ್ದು ಮತ್ತು ಸದರಿ ಅರ್ಜಿಯು ಸುಳ್ಳಿನಿಂದ ಕೂಡಿದ್ದ ಕಾರಣ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**PW- 1**

7. ನಿಪಿ-8 ದಾಖಲೆಯಲ್ಲಿ ದ್ವಿಚಕ್ರ ವಾಹನ ಸ್ಕಿಡ್ ಆಗಿ ಅಪಘಾತ ಆಗಿದೆ ಎಂದು ತೋರಿಸಿದ್ದು ಕಾರಣ ಸದರಿ ಆ ಕುರಿತು ವೈದ್ಯರನ್ನು ಸಾಕ್ಷಿಯಾಗಿ ಮಾಡಿಸಲು ನನಗೆ ಯಾವುದೇ ತೋದರೆ ಇಲ್ಲ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ

Petitioner counsel filed I.A.No.2 U/o 7 R.14(a) R/w sec 151 of CPC along with list with documents.

Respondent No.2 counsel submitted no objection to allow the I.A.No.2.

Hence, I.A.No.2 is allowed and additional documents are received on records.

Petitioner present and examined as PW.1 and got marked Ex.P-1 to Ex.P-19 and fully cross examined by counsel for Respondent No.2.

Advocate for Respondent No.1 repeatedly called out absent, hence cross of PW-1 by Respondent No.1 is taken as nil.

For further evidence.

Call on 12-09-2024.

III Addl. Sr.C.J & JMFC.,RNR.